1991-92ನೇ ಸಾಲಿನಲ್ಲಿ ವಸೂಲಾದ ಮಾರಾಟ ತೆರಿಗೆ ಒಟ್ಟು ಮೊತ್ತ

1962. ಶ್ರೀ ಮನೋಹರ್ ಆಯ್ನಾಪುರ್ (ಬೆಳ್ಳಾಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ರ ಸಾಲಿನಲ್ಲಿ ವಸೂಲಿಯಾದ ಮಾರಾಟ ತೆರಿಗೆ ಒಟ್ಟು ಮೊತ್ತ ಎಷ್ಟು:

ಆ) ಹೆಚ್ಚಳದ ಶೇಕಡಾವಾರು ಪ್ರಮಾಣ ಎಷ್ಟು:

ಇ) ಗುರಿಯಲ್ಲಿ ಬಾಕಿ ಇರುವ ಒಟ್ಟು ಮೊತ್ತವೆಷ್ಟು:

ಈ) 1991-92ರ ಸಾಲಿನಲ್ಲಿ ವಸೂಲಿಯಾದ ಪ್ರವೇಶ ತೆರಿಗೆ ಒಟ್ಟು ಮೊತ್ತವೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಫೆಬ್ರವರಿ 1992ರ ಅಂತ್ಯಕ್ಕೆ 1,395.29 ಕೋಟಿ ರೂ.ಗಳು.

ಆ) ಶೇಕಡ 21.94.

ಇ) 1991 ಸೆಪ್ಟೆಂಬರ್ ಅಂತ್ಯದವರೆಗೆ ಹಳೇ ಬಾಕಿ ಮೊತ್ತವಾದ 168.79 ಕೋಟಿ ರೂ.ಗಳು ಸೇರಿದಂತೆ ಒಟ್ಟು 236.23 ಕೋಟಿ ರೂ.ಗಳು.

ಈ) 1992 ಫೆಬ್ರವರಿ ಅಂತ್ಯದವರೆಗೆ 69.18 ಕೋಟಿ ರೂ.ಗಳು.

ಹತ್ತು ವರ್ಷ ಕಾರಾಗೃಹದಲ್ಲಿರುವ ಖೈದಿಗಳ ಬಿಡುಗಡೆ.

304. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

10 ವರ್ಷ ಜೀವಾವಧಿ ಶಿಕ್ಷೆ ಅನುಭವಿಸಿ ಕಾರಾಗೃಹದಲ್ಲಿರುವ ಖೈದಿಗಳನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು) :

ಇದು ತೀವ್ರ ಪರಿಶೀಲನೆಯಲ್ಲಿ ಇರುತ್ತೆ.

ಉತ್ತರ ಕರ್ನಾಟಕದಲ್ಲಿ ಉಚ್ಚ ನ್ಯಾಯಾಲಯದ ಪೀಠ

1525. ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ಉಚ್ಚ ನ್ಯಾಯಾಲಯದ ಪೀಠವೊಂದನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಯೋಚಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ಯಾವ ಸ್ಥಳವನ್ನು ಗುರ್ತಿಸಲಾಗಿದೆ.

ಇ) ಅದು ಯಾವಾಗ ಕಾರ್ಯಾರಂಭ ಪ್ರಾರಂಭಿಸುವುದು?